**ಕ್ಯಾನ್‌ಫಿನ್ ಹೋಮ್ಸ್ ಲಿ.**
ನೊಂದಾಯಿತ ಕಛೇರಿ: ನಂ.29/1, 1ನೇ ಮಹಡಿ,
ಸರ್ ಎಮ್.ಎನ್. ಕೃಷ್ಣ ರಾವ್ ರಸ್ತೆ,
ಲಾಲ್‌ಬಾಗ್ ವೆಸ್ಟ್ ಗೇಟ್ ಹತ್ತಿರ,
ಬಸವನಗುಡಿ, ಬೆಂಗಳೂರು 560 004.
E-mail: compsec@canfinhomes.com
ದೂರವಾಣಿ: 080–48536192/ 080–41261144
ಫ್ಯಾಕ್ಸ್: 080–26565746
ವೆಬ್:www.canfinhomes.com
CIN:L85110KA1987PLC008699

HAVE A HOME A CAN FIN HOME
Can Fin Homes Ltd
(Sponsor : CANARA BANK)
HOME LOANS ✦ DEPOSITS
*Translating Dreams into Reality*
**ಕ್ಯಾನ್ ಫಿನ್ ಹೋಮ್ಸ್ ಲಿ.**

# ಸೂಚನೆ

## (ಕಂಪನಿಯ ಈಕ್ವಿಟಿ ಷೇರುದಾರರ ಗಮನಕ್ಕೆ)

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಐಇಪಿಎಫ್) (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು 2016 ರಂತೆ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಮತ್ತು 7 ವರ್ಷಗಳ ಕಾಲ ಸ್ವೀಕರಿಸದ ಅಥವಾ ಪಾವತಿಯಾಗದ 2015–16 ಆರ್ಥಿಕ ವರ್ಷದ ಅಂದರೆ ಜುಲೈ 20, 2016ರಂದು ಘೋಷಿತ ಲಾಭಾಂಶವು ಐಇಪಿಎಫ್ ಖಾತೆಗೆ ವರ್ಗಾಯಿಸಲು ಅರ್ಹವಾಗುವುದು. ಡಿಪಾಸಿಟರಿ ಕಾಯ್ದೆ 1996ರ ಅಡಿಯಲ್ಲಿ ಅಡಮಾನ ಮಾಡಿದ/ಒತ್ತೆ ಇಟ್ಟಿರುವ ಅಥವಾ ನ್ಯಾಯಾಲಯ/ಟ್ರಿಬ್ಯುನಲ್‌ಗಳು ನಿರ್ದಿಷ್ಟವಾಗಿ ವರ್ಗಾವಣೆಯನ್ನು ನಿರ್ಬಂಧಿಸಿದ ಷೇರುಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.

ಸತತ 7 ವರ್ಷಗಳಿಂದ ಲಾಭಾಂಶ ಪಡೆಯದ ಹೂಡಿಕೆದಾರರ ಷೇರುಗಳನ್ನು ಸಹ ಮೇಲೆ ಹೇಳಲಾದ ನಿಯಮಗಳು ಹಾಗೂ 2021ರ ತಿದ್ದುಪಡಿ ಮಾಡಿದ ನಿಯಮಗಳಲ್ಲಿ ನಿಗದಿಪಡಿಸಿದಂತೆ ಕಾರ್ಯವಿಧಾನದ ಪ್ರಕಾರ ವರ್ಗಾಯಿಸಲಾಗುತ್ತದೆ.

ಮೇಲೆ ತಿಳಿಸಿದ ನಿಯಮಗಳ ಪ್ರಕಾರ ಷೇರುದಾರರಿಗೆ, ಐಇಪಿಎಫ್ ಖಾತೆಗೆ ವರ್ಗಾವಣೆಯಾಗುವ ವಿವರಗಳನ್ನು ಈಗಾಗಲೇ ಪ್ರತ್ಯೇಕವಾಗಿ ತಿಳಿಸಲಾಗಿದೆ ಹಾಗೂ ನಮ್ಮ ಜಾಲತಾಣದಲ್ಲಿಯೂ ಸಹ ಒದಗಿಸಲಾಗಿದೆ. ಸಂಬಂಧಪಟ್ಟ ಷೇರುದಾರರು, ತಮ್ಮ ಹೆಸರು, ಫೋಲಿಯೋ/ಡಿಪಿಐಡಿ–ಕ್ಲೈಂಟ್ ಐಡಿ ಮತ್ತು ಲಾಭಾಂಶ ಪಡೆಯದ ಮೊತ್ತದ ವಿವರಗಳನ್ನು ಪರಿಶೀಲಿಸಲು ನಮ್ಮ ಜಾಲತಾಣ www.canfinhomes.comನ 'Investor'ಪುಟದಲ್ಲಿ ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಬಹುದು. ಷೇರುದಾರರು 2015–16 ಆರ್ಥಿಕ ವರ್ಷ ಮತ್ತು ನಂತರದ ಲಾಭಾಂಶವನ್ನು ಜುಲೈ 19, 2023ರೊಳಗೆ ಐಇಪಿಎಫ್ ಖಾತೆಗೆ ವರ್ಗಾವಣೆಯಾಗುವ ಮೊದಲು ಪಡೆಯಬೇಕಾಗಿ ಕೋರಲಾಗಿದೆ.

ಸಂಬಂಧಪಟ್ಟ ಷೇರುದಾರರಿಗೆ ತಿಳಿಸುವುದೇನೆಂದರೆ ಭೌತಿಕವಾಗಿ ಹೊಂದಿದ ಷೇರುಗಳನ್ನು ಐಇಪಿಎಫ್ ಖಾತೆಗೆ ವರ್ಗಾಯಿಸುವ ಸಲುವಾಗಿ ಕಂಪನಿಯು ಹೊಸ ಷೇರು ಪತ್ರಗಳನ್ನು ನೀಡುವುದು. ನಂತರ ಅಸಲಿ ಷೇರು ಪತ್ರಗಳು ತಂತಾನೇ ರದ್ದುಗೊಳ್ಳುವವು. ಕಂಪನಿಯು ಸಾಂಸ್ಥಿಕ ಕ್ರಿಯೆಯ ಮೂಲಕ ಡಿಪಾಸಿಟರಿಗೆ ಹೊಸ ಷೇರು ಪತ್ರವನ್ನು ಡಿಮ್ಯಾಟ್ ರೂಪಕ್ಕೆ ಪರಿವರ್ತಿಸಿ ಐಇಪಿಎಫ್ ಖಾತೆಗೆ ವರ್ಗಾವಣೆ ಮಾಡುತ್ತದೆ. ಡಿಮ್ಯಾಟ್ ರೂಪದಲ್ಲಿ ಹೊಂದಿದ ಸಂಬಂಧಪಟ್ಟ ಷೇರುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕಂಪನಿಯು ಸಾಂಸ್ಥಿಕ ಕ್ರಿಯೆಯ ಮೂಲಕ ಡಿಪಾಸಿಟರಿಗೆ ಡಿಮ್ಯಾಟ್ ರೂಪದಲ್ಲಿ ಐಇಪಿಎಫ್ ಖಾತೆಗೆ ವರ್ಗಾವಣೆ ಮಾಡಲು ತಿಳಿಸುತ್ತದೆ.

**ಕಂಪನಿಯು ಸಂಬಂಧಪಟ್ಟ ಷೇರುದಾರರಿಂದ ಜುಲೈ 19, 2023 ರೊಳಗೆ ಯಾವುದೇ ವಿನಂತಿಯನ್ನು ಸ್ವೀಕರಿಸದಿದ್ದಲ್ಲಿ, ಮೇಲೆ ತಿಳಿಸಿದ ನಿಯಮಗಳನುಸಾರ, ಲಾಭಾಂಶ 2016ರ ಮೊತ್ತವನ್ನು ಐಇಪಿಎಫ್‌ಗೆ ನಿಗದಿತ ಸಮಯದೊಳಗೆ ವರ್ಗಾವಣೆ ಮಾಡುವುದು. ಸತತ ಏಳು ವರ್ಷಗಳಿಂದ ಲಾಭಾಂಶ ಪಡೆಯದವರ ಷೇರುಗಳನ್ನೂ ಸಹ ಮತ್ತೆ ಯಾವುದೇ ಸೂಚನೆ ನೀಡದೆ ವರ್ಗಾವಣೆ ಮಾಡಲಾಗುವುದು.**

ದಯವಿಟ್ಟು ಗಮನಿಸಿ: ಸ್ವೀಕರಿಸದ ಲಾಭಾಂಶ ಮತ್ತು ಐಇಪಿಎಫ್‌ಗೆ ವರ್ಗಾವಣೆಗೊಂಡ ಷೇರುಗಳ ವಿಷಯದಲ್ಲಿ ಕಂಪನಿಗೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ಷೇರುದಾರರು ಲಾಭಾಂಶ ಮತ್ತು ಐಇಪಿಎಫ್‌ಗೆ ವರ್ಗಾವಣೆಗೊಂಡಿರುವ ಷೇರುಗಳನ್ನು ಐಇಪಿಎಫ್ ಅಧಿಕಾರಿಗಳಿಂದ ನಿಯಮಗಳಲ್ಲಿ ಸೂಚಿಸಿದ ವಿಧಾನವನ್ನು ಅನುಸರಿಸಿದ ನಂತರ ಅಂತಹ ಷೇರುಗಳ ಮೇಲೆ ಹಕ್ಕು ಪಡೆಯಬಹುದು.

ಮೇಲಿನ ವಿಷಯದ ಬಗ್ಗೆ ಯಾವುದೇ ಮಾಹಿತಿ ಬೇಕಿದ್ದಲ್ಲಿ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್, ಕ್ಯಾನ್‌ಬ್ಯಾಂಕ್ ಕಂಪ್ಯೂಟರ್ ಸರ್ವೀಸಸ್ ಲಿಮಿಟೆಡ್‌ನ ಶ್ರೀ ಬಿ.ಎಸ್. ನಾಯ್ಡು, ವ್ಯವಸ್ಥಾಪಕರು, ದೂರವಾಣಿ: +91 80 23469661 ಗೆ ಸಂಪರ್ಕಿಸಬಹುದು ಅಥವಾ naidu@ccsl.co.in ಅಥವಾ investor.relationship@canfinhomes.com ಗೆ ಇ–ಅಂಚೆ ಮಾಡಬಹುದಾಗಿದೆ.

ಕ್ಯಾನ್ ಫಿನ್ ಹೋಮ್ಸ್ ಲಿಮಿಟೆಡ್ ಪರವಾಗಿ
ಸಹಿ/–
ವೀಣಾ ಜಿ. ಕಾಮತ್
ಡಿಜಿಎಂ ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 16/06/2023